ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಗಿಣಿವಾರದ ಅಮರೇಶ ಗಿಣಿವಾರ, ಅಂಚೆ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರು. ತನ್ನ ನೆಲದ ನಿಗಿನಿಗಿ ಕೆಂಡಗಳಂಥ ಬದುಕನ್ನು ಕಥೆಗಳಲ್ಲಿ ಕಾಣಿಸಲು ಹವಣಿಸುವ ಅಮರೇಶರ 'ಹಿಂಡೆಕುಳ್ಳು' ಹಾಗೂ 'ಬಾಂಗ್ಲಾದ ಹಕ್ಕಿಗಳು' ಸಂಕಲನದ ಕಥೆಗಳು ಸಹೃದಯರ ಮೆಚ್ಚುಗೆ ಪಡೆದಿವೆ, ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿವೆ. 'ಬಯಲು' ಪ್ರಕಟಿತ ಕವನಸಂಕಲನ. ಪ್ರಬಂಧ ಪ್ರಕಾರದಲ್ಲೂ ಅಮರೇಶ ಆಸಕ್ತರು.

ಟೇಮು ಐತಿ ಅವಸ್ರ್ಯಾಕ' ಅಂದಳು. ಅದೇ ಕೆಂಪು ಕಣ್ಣಿಲೇ ಅಣ್ಣ 'ಸುಣ್ಣ ಬಡೇತನ ಸವಕಾಶೇನು' ಅಂದ. ಅಳುವ ಕೂಸನ್ನ ಅತ್ತಿಗೆ ಎದೆಗವಚಿಕೊಂಡಳು. ಅತ್ತಿಗೆಯ ಮೌನ, ಸಮಾಧಾನದ ಮುಖ ಸ್ವಲ್ಪ ನಮಗೆ ನೆಮ್ಮದಿ ತಂದಿತ್ತು. ಕಷ್ಟದಾಗ ನಮ್ಮ ಜೊತಿಗಿ ಪ್ರಾಣಿ ಇದ್ದರೂನು ನಾವು ಸಾಯೋವರೆಗೂ ಅದರ ನೆನಪಿಟ್ಟರತೀವಿ. ನಮ್ಮೂರಿನ ಹಿರೇಮಣಿಗಳನ್ನ ನೆನಿಸಿಗೊಂಡು ನನ್ನ ರಕ್ತ ಕುದ್ಯಾಕ ಚೆಲುವು ಮಾಡ್ತಿ. ನನ್ನೇಣ್ತಿ ನನ್ನಲ್ಲಾಗುವ ಏರುಪೇರುಗಳನ್ನ ಗಮನಿಸಿ ಕಂಕುಳದಲ್ಲಿ ಕೈಯಾಕಿ ಎಡತೋಳನ್ನು ಒತ್ತಿಹಿಡಿದು ಅಮಾಯಕ ಕಣ್ಣುಗಳಿಂದ ದಿಟ್ಟಿಸಿ ನೋಡಿದಳು. ಅವಳ ಅನಾಥ ನೋಟ ನನ್ನ ಕರುಳನ್ನ ಒಂದು ಕ್ಷಣ ಹಿಂಡಿತು. ನಾನು ನಮ್ಮನೇಲಿ ಇದ್ದೀನೋ ಅಥವಾ ಕೈದಿ ಕೋಣೆಯಲ್ಲಿ ಇದ್ದೀನೋ ಅಂತ ಒಂದು ಸಲ ಮೈಜಾಡಿಸಿ ವಾಸ್ತವಕ್ಕೆ ಬಂದೆ. ನಮ್ಮಪ್ಪ ಕೆಬ್ಬಣದಂತಹ ಬೆರಳುಗಳನ್ನ ಸರಸರನೆ ಮಡಿಚಿ 'ಎಂಥಾ ವಂಶದಾಗ ಎಂಥೋನು ಹುಟ್ಟಿ...' ಅಂತ ಮಾತು ಅರ್ಧಕ್ಕೆ ನಿಲ್ಲಿಸಿ, ಬಂಡೆಗೆ ತನ್ನ ಮಡಿಚಿದ ಕೈಯಿಂದ ಡೆಮ್ಮ್ ಅಂತ ಗುದ್ದಿದಾಗ ಮತ್ತೆ ನನ್ನೇಣ್ತಿ ಮಳೆಯಲ್ಲಿ ತೋಯಿಸಿಕೊಂಡವಳಂತೆ ಗದಗದ ನಡುಗಿ ನನ್ನ ಮತ್ತಿಷ್ಟು ಒತ್ತಿ ಹಿಡಿದಳು. ಕರುಣೆಯ ಕಣ್ಣುಗಳಿಂದ ನನ್ನನೋಡಿ ಸಣ್ಣದನಿ ಮಾಡಿ, 'ಈ ಉರಾಗಳ ನೆಡೆ ಬೇಸಿಲ್ಲ. ನೀನು ಈ ಊರಾಗ ಹುಟ್ಟುಬಾರದಾಗಿತ್ತು' ಅಂದು ನನ್ನ ಹಲ್ಲಿನ ಮೇಲೆ ಕುಳಿತ ನೊಣವನ್ನು ತನ್ನ ಎಡಗೈಲೇ ಓಡಿಸಿದಳು.

ಅಮ್ಮಾ ನಿಧಾನಕ ಉಸಿರು ಎಳಕೊಂಡು 'ಬರೋ ಬಸವನ ಜಯಂತಿಗೆ ಎರಡು ವರ್ಷ ತುಂಬತಾವ ಅಂತ ಕಾಣುತ್ತಾ ಲಗ್ನಾಗಿ' ಅಂದಳು. 'ಅವತ್ತೇ ನಮ್ಮ ಮನಿತನದ ಮರ್ಯಾದೆ ಪಂಚಾತಿಕಟ್ಟಿಗೆ ಹರಾಜಾಗತ್ತೈತಿ' ಅಂತ ಅಣ್ಣ ಮರುಉತ್ತರ ಕೊಟ್ಟ. 'ಅಲೇ... ಮಲ್ಲಗಾ ನಿನಿಗಿ ಅರವತ್ತಾರು ನಂಬರ್ ಗ್ಯಾರಂಟಿಲೇ' ಅಂತ ಸಿಟ್ಟಗೇರಿ ನನಕಡೆ ಗೋಣು ತಿರುಗಿಸಿ ಗಟ್ಟಿಗೆ ಕೂಗಿದ.

ಈಗಾಗಲೇ ಊರು ಹುಟ್ಟಿದಾಗಿನಿಂದ ಅರವತ್ತೈದು ಮಂದಿ ಪರ್ಮನೆಂಟ್ ಹಡಕರು ಆಗಿದ್ದ ಲೆಕ್ಕ ಇಟಗೊಂಡು ನಮ್ಮಣ್ಣ ನನಿಗಿ ಅರವತ್ತಾರು ಅಂತ ತಾನೇ ಮುಂದಿನ ನಂಬರ್ ಕೊಟ್ಟಿದ್ದ. ಹಡಕರಾದ ಮೇಲೆ ಪಂಚರು ಬೀಜದ ಮನುಷ್ಯನ ಕೂಡ ಒಪ್ಪಂದ ಮಾಡಿಸಿ ಮಕ್ಕಳಾದ ತಕ್ಷಣ ಅವರನ್ನ ಹಡಕರ ಪಟ್ಟಿಯಿಂದ ತೆಗೆಸುತ್ತಾರೆ. ಬೀಜದ ಮನುಷ್ಯನ ಅವಧಿ ಮೂರು ವರ್ಷದವರೆಗೂ ಇರುತ್ತೆ, ಅಷ್ಟರೊಳಗೆ ಮಕ್ಕಳನ್ನ ಮಾಡಿ ಕೊಟ್ಟರೆ ಸಂಬಂಧಪಟ್ಟ ಗಂಡ ಅವನಿಗೆ ಬಂಗಾರ ಮತ್ತು ದುಡ್ಡಿನ ರೂಪದಲ್ಲಿ ಇನಾಮು ಕೊಡಬೇಕು. ಒಂದುವೇಳೆ ಮೂರು ವರ್ಷವಾದ್ರೂ ಮಕ್ಕಳಾಗಲಿಲ್ಲಂದ್ರೆ ಅವನಿಗೆ ಸಮಯ ಹಾಳು ಮಾಡಿದ ಆಧಾರದ ಮೇಲೆ ದಂಡದ ರೂಪದಲ್ಲಿ ಪಂಚಾಯಿತಿ ನಿಗದಿಪಡಿಸಿದಷ್ಟು ಕೊಡಬೇಕು. ಐದು ವರ್ಷಕ್ಕೊಂದು ಸಲ ಗೌಡರ ವಂಶದಲ್ಲೇ ಬೀಜದ ಮನುಷ್ಯನನ್ನ ಪಟ್ಟಕ್ಕೆ ಹಾಕುತ್ತಾರೆ. ಈ ಸಲ ಅಧಿಕಾರದಲ್ಲಿ ನಾಗನಗೌಡ ಐದಾನ. ಬೀಜದ ಮನುಷ್ಯನ ಸಹಾಯ ತಗಂಡ್ರುನೂ ಸಾಯೋವರಿಗೂ ಅವರ ಕೈಲೇ ಮಕ್ಕಳ ಮಾಡಿಕೊಳ್ಳೋದು ಆಗಲಿಲ್ಲ ಅಂದ್ರೆ ಅವರು ಪರ್ಮನೆಂಟ್ ಹಡಕರು. ಇಂತ ಬಿರುದು ಹೊಂದಿದೋರು ಇದುವರೆಗೆ ನಮ್ಮೂರಿನ ಇತಿಹಾಸದಲ್ಲಿ ಅರವತ್ತೈದು ಮಂದಿ ಆಗಿ, ಕೆಲವರು ಮಣ್ಣಾಗಿ ಹೋಗಿದ್ದಾರೆ. ಒಂದು ಸೋಜಿಗದ ವಿಷಯವೇನಂದರೆ, ಇದುವರೆಗೂ ಮೇಲ್ಜಾತೇರು ಯಾರೂ ಹಡಕರು ಆಗಿಲ್ಲ. ಮತ್ತೆ ಅಪ್ಪಗ ಸಿಟ್ಟು ಉಲ್ಬಣಾಗಿ 'ಅಲೇ ಮಲ್ಲಗಾ... ನಿನಿಗಿ ಬೀಜದ ಮನುಷ್ಯನೇ ಗತಿ ನೋಡಲೇ' ಅಂದ. ಆ ಮಾತು ಕೇಳಿ